ಒ.ಎಸ್. - 186/2024

ಪಿ.ಡಬ್ಲ್ಯು - 01

**ದಿನಾಂಕ 06-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - ಪ್ರತಿವಾದಿ ಪರ ವಕೀಲರಿಂದಃ**

ಕ್ರಯಪತ್ರ ಆದ ತಕ್ಷಣದಿಂದ ಪ್ರತಿವಾದಿ ಅಲ್ಲಿಯೇ ವಾಸಿಸುತಿದ್ದಾರೆ. ನನ್ನ ತಮ್ಮನ ಹೆಂಡತಿಯ ತಾಯಿಯ ಹೆಸರಿಗೆ ಕ್ರಯಪತ್ರ ಆಗಿರುತ್ತದೆ. ಅವರು ನನಗೆ ಜಿಪಿಎ ಕೊಟ್ಟಿರುತ್ತಾರೆ. ಅಹಲ್ಯಾ ಶೆಟ್ಟಿ ರವರು ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. ಅಹಲ್ಯಾ ಶೆಟ್ಟಿ ರವರು 2016 ರಲ್ಲಿ ತೀರಿಕೊಂಡಿರುತ್ತಾರೆ . ಅಹಲ್ಯಾ ಶೆಟ್ಟಿ ಆಸ್ತಿಯ ಬಗ್ಗೆ ಅವರ ಗಂಡ ಮತ್ತು ಮಕ್ಕಳಿಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿ. ಅಹಲ್ಯಾ ಶೆಟ್ಟಿ ರವರ ಜೊತೆಯೇ ಪ್ರತಿವಾದಿ ವ್ಯವಹಾರ ಮಾಡಿರುತ್ತಾರೆ . ಅಹಲ್ಯಾ ಶೆಟ್ಟಿ ವ್ಯವಹಾರದ ಎಲ್ಲಾ ವಿಷಯಗಳನ್ನು ಅವರ ಗಂಡ ಮತ್ತು ಮಕ್ಕಳಿಗೆ ತಿಳಿಸಿರುತಾರೆ. ಅಹಲ್ಯಾ ಶೆಟ್ಟಿ ರವರ ಗಂಡ ಮತ್ತು ಮಕ್ಕಳು ವಿದೇಶದಲ್ಲಿ ಇರುತ್ತಾರೆ . ಅಹಲ್ಯಾ ಶೆಟ್ಟಿಯ ಗಂಡ ಮತ್ತು ಮಕ್ಕಳು ಒಂದು ವರ್ಷಕ್ಕೆ ಅಥವಾ ಎರಡು ವರ್ಷಕ್ಕೊಮ್ಮೆ ಬರುತ್ತಾರೆ. ಜಿಪಿಎ ನ್ನು ನನಗೆ 22-10-2024 ರಂದು ರಶ್ಮಿ ಜೆ ಶೆಟ್ಟಿ ಕೊಟ್ಟಿರುತ್ತಾರೆ. ರಶ್ಮಿ ಜೆ ಶೆಟ್ಟಿ ಒಬ್ಬರೇ ನನಗೆ ಜಿಪಿಎನ್ನು ಕೊಟ್ಟಿರುತ್ತಾರೆ. ವಕೀಲರಾದ ವೀಣಾ ಭಟ್ ರವರು ನೋಟರಿಯಾಗಿ ಅದನ್ನು ಅಟೆಸ್ಟೇಶನ್ ಮಾಡಿರುತಾರೆ. ಜಿಪಿಎ ಕೊಡಲು ರಶ್ಮಿ ಜೆ ಶೆಟ್ಟಿ ಭಾರತಕ್ಕೆ ಬಂದಿದ್ದರು. 2016 ರಿಂದ ಈಗಲೂ ಕೂಡ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಇರುತ್ತಾರೆ . ಅಹಲ್ಯಾ ಶೆಟ್ಟಿ ರವರ ಖಾತೆಗೆ ಪ್ರತಿವಾದಿ ಬಾಡಿಗೆಯನ್ನು ಹಾಕುತಿದ್ದರು. ಅಹಲ್ಯಾ ಶೆಟ್ಟಿ ರವರು ತೀರಿಕೊಂಡ ನಂತರ ಅವರ ವಾರೀಸುದಾರರ ಮಾಹಿತಿಯ ಮೇರೆಗೆ ರಶ್ಮಿ ಜೆ ಶೆಟ್ಟಿ ಖಾತೆಗೆ ಪ್ರತಿವಾದಿ ಬಾಡಿಗೆ ಹಾಕುತಿದ್ದರು. ಈ ಎಲ್ಲಾ ಮಾಹಿತಿಯನ್ನು ರಶ್ಮಿ ಜೆ ಶೆಟ್ಟಿ ರವರು ಜಿಪಿಎ ಕೊಟ್ಟ ಸಮಯದಲ್ಲಿ ಕೊಟ್ಟಿರುತಾರೆ. ವಕೀಲರಿಗೆ ಮಾಹಿತಿಯನ್ನು ಕೂಡ ರಶ್ಮಿ ಜೆ ಶೆಟ್ಟಿ ರವರು ಕೊಟ್ಟಿರುತ್ತಾರೆ ನಾನು ಕೂಡ ಇದ್ದೆ . ರಶ್ಮಿ ಜೆ ಶೆಟ್ಟಿ ರವರು ವಿದೇಶದಲ್ಲಿ ಇರುವುದರಿಂದ ಅವರು ನ್ಯಾಯಲಯಕ್ಕೆ ಬಂದು ಸಾಕ್ಷ್ಯ

ನುಡಿಯಲು ಆಗುವುದಿಲ್ಲ, ಆದ್ದರಿಂದ ನನಗೆ ಜಿಪಿಎ ಕೊಟ್ಟಿರುತ್ತಾರೆ . ಅಹಲ್ಯಾ ಶೆಟ್ಟಿ ಮತ್ತು ಅವರ ಮಕ್ಕಳ ನಡುವೆ ಅಹಲ್ಯಾ ಶೆಟ್ಟಿ ಇರುವವರಗೆ ದಾವಾಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ತಂಟೆ ತಕರಾರು ಇರಲಿಲ್ಲ . 2023 ರವರೆಗೆ ಪ್ರತಿವಾದಿ ಮತ್ತು ಅಹಲ್ಯಾ ಶೆಟ್ಟಿ ಕುಟುಂಬಸ್ಥರ ನಡುವೆ ಯಾವುದೇ ತೊಂದರೆ ಇರಲಿಲ್ಲ . ರಶ್ಮಿ ಜೆ ಶೆಟ್ಟಿ ರವರನ್ನು ಬಿಟ್ಟು ನಾನು ಅಹಲ್ಯಾ ಶೆಟ್ಟಿಯ ಗಂಡ ಮತ್ತು ಇತರ ಮಕ್ಕಳ ಜೊತೆ ನಾನು ಮಾತನಾಡುವುದಿಲ್ಲ. ಅಹಲ್ಯಾ ಶೆಟ್ಟಿ ಮೃತಪಟ್ಟ ನಂತರ ಅಹಲ್ಯಾ ಶೆಟ್ಟಿ ಗಂಡ ಮತ್ತು ಮಕ್ಕಳು ದಾವಾ ಸ್ವತ್ತಿನ ಹಕ್ಕುದಾರರು ಎಂದರೆ ಸರಿ. ಅಹಲ್ಯಾ ಶೆಟ್ಟಿ ಮೃತಪಟ್ಟ ನಂತರ ಬಾಡಿಗೆ ಮುಂದುವರಿಯುತಿತ್ತು ದೂರವಾಣಿ ಮುಖೇನ ಅವರುಗಳು ಮಾತನಾಡಿಕೊಳ್ಳುತಿದ್ದರು .

ಹರಿಶ್ಚಂದ್ರ ಶೆಟ್ಟಿ ಎಂದರೆ ಅಹಲ್ಯಾ ಶೆಟ್ಟಿಯಗಂಡ . ರಶ್ಮಿ ಮತ್ತು ರೋಹನ್ ಅಹಲ್ಯಾ ಶೆಟ್ಟಿ ಯ ಮಕ್ಕಳು . ಸಾಕ್ಷಿಗೆ ಒಂದು ಕರಾರನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಸದ್ರಿ ಕರಾರು ಆಗುವಾಗ ನಾನು ಇದ್ದೆ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ಕರಾರನ್ನು ಹಾಜರುಪಡಿಸಿದಾಗ ಸಾಕ್ಷಿ ಅವರ ಸಹಿಯನ್ನು ಒಪ್ಪಿಕೊಂಡ ಮೇರೆಗೆ ಸದ್ರಿ ಕರಾರನ್ನು ನಿಗದಿತ ಸ್ಟಾಂಪ್ ಪೇಪರ್ ನ ಮೇಲೆ ಬರೆಯದೇ ಇರುವುದರಿಂದ ಸ್ಟಾಂಪ್ ಶುಲ್ಕವನ್ನು ಕಟ್ಟುವ ಇರಾದೆ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಡಿ-1 ಎ ಎಂದು ಗುರುತಿಸಲಾಯಿತು. ( ಸದ್ರಿ ದಾಖಲೆ ಕ್ರಯದ ಕರಾರು ಆಗಿದ್ದು ಅದು ಒಟ್ಟು ರೂ 40 ಲಕ್ಷಕ್ಕೆ ಕ್ರಯಕ್ಕೆ ತೆಗೆದುಕೊಳ್ಳಲು ಒಪ್ಪಿರುವುದಾಗಿ ಬರೆದಿದ್ದು, ಆದರೇ ರೂ 200 ಸ್ಟಾಂಪ್ ಶುಲ್ಕ ಮಾತ್ರ ಪಾವತಿಸಿರುವ ಕಾರಣ ಸದ್ರಿ ದಾಖಲೆಯನ್ನು ಇಂಪೌಂಡ್ ಮಾಡಿಕೊಳ್ಳಲಾಯಿತು.) ಪ್ರತಿವಾದಿಯು advance ರೂ 2 ಲಕ್ಷ ಗಳನ್ನು ಚೆಕ್ ಮುಖೇನ ಕರಾರು ಆಗುವಾಗ ಕೊಟ್ಟಿರುತ್ತಾರೆ. ಕರಾರಿನ ಪ್ರಕಾರ ನಾವು ಪ್ರತಿವಾದಿಗೆ ದಾವಾಸ್ವತಿಗೆ ಸಂಬಂಧಪಟ್ಟಂತೆ ಕ್ರಯಕ್ಕೆ ಕೊಡಲು ಒಪ್ಪಿದ್ದೆವು ಎಂದರೆ ಸರಿ . ಸಾಕ್ಷಿ ಮುಂದುವರಿದು

ನಾನು ಸ್ವಯಂ ಆಗಿ ಮತ್ತು ಜಿಪಿಎ ಹೋಲ್ಡರ್ ಆಗಿ ಬರೆದುಕೊಡಲು ಒಪ್ಪಿದ್ದೆ. ಸಾಕ್ಷಿ ಮುಂದುವರಿದು ರಶ್ಮಿ ಜೆ ಶೆಟ್ಟಿ ಆಕೆ ಸ್ವಯಂ ಹಕ್ಕುದಾರಳಾಗಿ ಮತ್ತು ಅವರ ತಮ್ಮ ರೋಹನ್ ಶೆಟ್ಟಿ ಮತ್ತು ತಂದೆ ಹರಿಶ್ಚಂದ್ರ ಶೆಟ್ಟಿಯ ಜಿಪಿಎ ಹೋಲ್ಡರ್ ಆಗಿ ಕರಾರು ಬರೆದುಕೊಟ್ಟಿದ್ದರು. ಕರಾರು ಮಾಡಿಕೊಡುವಾಗ ಬಾಡಿಗೆ ವಿಚಾರವನ್ನು ಬಿಟ್ಟು ಬರೀ ಕ್ರಯಕ್ಕೆ ಕೊಡುವ ಬಗ್ಗೆ ಮಾತ್ರ ನಿಡಿ 1 ಕರಾರಿನಲ್ಲಿ ನಮೂದು ಮಾಡಿದ್ದೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ಪ್ರತ್ಯೇಕ ವಿವಾದ ಎಂದು ತಿಳಿಸಿರುತ್ತಾರೆ. ಕ್ರಯಕ್ಕೆ ಕೊಡಲು ಒಪ್ಪಿಕೊಂಡು ಕರಾರು ಮಾಡಿದ ನಂತರ ಬಾಡಿಗೆ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಕರಾರು ಮಾಡಿ ಕೊಡುವಾಗ ರಶ್ಮಿ ಜೆ ಶೆಟ್ಟಿ ರವರು ಇನ್ನು ಮುಂದೆ ಬಾಡಿಗೆ ಕೊಡುವ ಅವಶ್ಯಕತೆ ಇಲ್ಲ ಕರಾರಿನ ಆದಾರದ ಮೇಲೆ ಆದಷ್ಟು ಬೇಗ ಕ್ರಯಪತ್ರ ಮಾಡಿಸಿಕೊಳ್ಳಿ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ . ನಿಡಿ 1 ಕರಾರಿನಲ್ಲಿ ಕರಾರು ಮಾಡಿಕೊಟ್ಟಿದರೂ ಕೂಡ ಬಾಡಿಗೆ ಮೊದಲಿದ್ದ ರೀತಿಯೇ ಮುಂದುವರಿಯುತ್ತದೆ ಎಂದು ಬರೆಯಲು ತೊಂದರೆ ಇತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತೊಂದರೆ ಇರಲಿಲ್ಲ . ಸಾಕ್ಷಿ ಮುಂದುವರಿದು ಅದು ಪ್ರತ್ಯೇಕ ವಿವಾದ ಎಂದು ತಿಳಿಸಿರುತ್ತಾರೆ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಇ ಖಾತಾ ಮತ್ತು ಇತರೇ ದಾಖಲಾತಿಗಳನ್ನು ಹಾಜರುಪಡಿಸಬಹುದು. ನೊಂದಾವಣೆ ಮಾಡಲು ಬೇಕಾದಂತ ಎಲ್ಲಾ ದಾಖಲಾತಿಗಳನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿದ್ದೇನೆ. ಸಾಕ್ಷಿ ಮುಂದುವರಿದು ಸ್ವಲ್ಪ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಉಳಿದ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಕರಾರಿನ ನಿಭಂದನೆ ಗಳ ಪ್ರಕಾರ ನಾನು ನೊಂದಾವಣೆ ಆಗಲು ಬೇಕಾಂದತಹ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಮತ್ತು ಕೊಡಲಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಪ್ರತಿವಾದಿಗೆ ಕೊಡದೇ ಇದ್ದುದರಿಂದ ಪ್ರತಿವಾದಿ ನೊಂದಾವಣೆ ಮಾಡಿಸಿಕೊಳ್ಳಲು ಬರಲಿಲ್ಲ ಎಂದರೆ ಸರಿಯಲ್ಲ . ನಾವು ದಾಖಲಾತಿ ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ನಾವು ವಾಟ್ಸ್ ಆಪ್ ಮುಖೇನ ಎಲ್ಲಾ ದಾಖಲಾತಿಗಳನ್ನು

ಕಳುಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಈಗಲೂ ಕೂಡ ಪ್ರತಿವಾದಿಗಳು ನೊಂದಾವಣೆ ಮಾಡಿಕೊಳ್ಳಲು ತಯಾರು ಇದ್ದಾರೆ ಎಂದರೆ ಸರಿಯಲ್ಲ .

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.